<u>ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>

**ಸಿ.ಸಿ. ನಂ.5/2021**

| | | | |
|---|---|---|---|
| **ಹೆಸರು** | **:** | **ಮಹೇಬೂಬ** | **ದೋ.ಸಾ. 3** |
| **ತಂದೆಯ ಹೆಸರು** | **:** | **ಬಾಬುಮಿಯಾ** | **ಪ್ರಾ.ಸಾ. 2** |
| **ವಯಸ್ಸು** | **:** | **47 ವರ್ಷ** | **ದಿನಾಂಕಃ 16-11-2021** |
| **ಉದ್ಯೋಗ** | **:** | **ಕೂಲಿ** | |
| **ವಾಸಸ್ಥಳ** | **:** | **ಚಂದಾಪೂರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ನನಗೆ ಈ ಪ್ರಕರಣದ ಸಾಕ್ಷಿದಾರರಾದ ಚಾಸಾ-1, 2 ಮತ್ತು 9 ರವರು ನನಗೆ ಗೊತ್ತಿಲ್ಲ.

ಈಗ ನನಗೆ ತೋರಿಸಲಾದ ದಾಖಲೆಯಲ್ಲಿರುವ ಸಹಿ ನನ್ನದೇ. ಸಾಕ್ಷಿ ನೋಡಿ ಗುರುತಿಸಿದ ದಾಖಲೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ಈಗ ನಿಪಿ-1 (ಬಿ) ಎಂದು ಗುರುತಿಸಲಾಯಿತು.

ಈಗ್ಗೆ ಎರಡೂವರೆ ವರ್ಷಗಳ ಹಿಂದೆ ನಾನು ಚಿಂಚೋಳಿ ಬಸ್ ನಿಲ್ದಾಣದಲ್ಲಿದ್ದಾಗ ಅಲ್ಲಿಗೆ ಬಂದಿದ್ದ ಪೋಲೀಸರು ನಿಪಿ-1 ರ ದಾಖಲೆಯ ಮೇಲೆ ನನ್ನ ಸಹಿ ಪಡೆದರು.

ನಿಪಿ-1 ರ ದಾಖಲೆಯಲ್ಲಿ ಏನು ಬರೆದಿದೆ ಎನ್ನುವುದು ನನಗೆ ಗೊತ್ತಿಲ್ಲ. ಪೋಲೀಸರು ಅದನ್ನು ನನಗೆ ಓದಿ ಹೇಳಿಲ್ಲ. ಪೋಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರು ಜರುಗಿಸಿದ ಪಂಚನಾಮೆಗೆ ಈ ಸಾಕ್ಷಿ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ದಿನಾಂಕ 31-08-2019 ರಂದು ಚಂದಾಪೂರದ ಗಾಂಧಿ ಚೌಕದ ಹತ್ತಿರ ಇರುವ ಸಾರ್ವಜನಿಕ ರಸ್ತೆಯ ಬಳಿ ನನ್ನನ್ನು ಮತ್ತು ಚಾಸಾ-2 ರವರನ್ನು ಕರೆಸಿದ್ದ ಚಿಂಚೋಳಿ ಪಿ.ಎಸ್.ಐ. ಆಗಿದ್ದ ಚಾಸಾ-9

ರವರು ಅವರೊಂದಿಗೆ ಹಾಜರಿದ್ದ ಚಾಸಾ-1 ರವರು ತೋರಿಸಿದಂತೆ ದರೋಡೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ನನ್ನ ಮತ್ತು ಚಾಸಾ-2 ರವರ ಸಮಕ್ಷಮ ನಿಪಿ-1 ರ ಮಹಜರ್ ನ್ನು ಸಂಜೆ 05ಃ00 ರಿಂದ 06ಃ30 ಗಂಟೆಯವರೆಗೆ ಬರೆದರು ಎನ್ನುವುದು ಸರಿಯಲ್ಲ.

ನಿಪಿ-1 ರ ದಾಖಲೆಯನ್ನು ಪೋಲೀಸರು ನನಗೆ ಓದಿ ಹೇಳಿದ್ದರು ಎನ್ನುವುದು ಸರಿಯಲ್ಲ.

ನನ್ನ ಸಮಕ್ಷಮವೇ ನಿಪಿ-1 ರ ಪಂಚನಾಮೆಯನ್ನು ಪೋಲೀಸರು ಜರುಗಿಸಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎಂ.ಎಸ್.ಎಸ್. ವಕೀಲರಿಂದಃ ಇಲ್ಲಾ**

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**